ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

ಸ್ಪೆಷಲ್ ಕೇಸ್ ನಂಬ್ರ 184/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ದಿನೇಶ್ ಎಂ. | ಫ್ರಾಸಾಃ 3 |
| ತಂದೆಯ ಹೆಸರು | : | ಐತ ಎಂ. | ಚಾಸಾಃ 13 |
| ಪ್ರಾಯ | : | 37 ವರ್ಷ | ದಿನಾಂಕಃ 21.08.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪೊಲೀಸ್ ಮುಖ್ಯ ಪೇದೆ, ಮಂಗಳೂರು ಪೂರ್ವ ಪೊಲೀಸ್ ಠಾಣೆ | |
| ವಾಸಸ್ಥಳ | : | ಮಂಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಜುಲೈ 2019 ರಿಂದ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

2) 07.09.2020ರಂದು ಈ ಪ್ರಕರಣಕ್ಕೆ ಸಂಬಂಧಿಸಿದ ಪ್ರಥಮ ವರ್ತಮಾನ ವರದಿಯನ್ನು ಸಾಯಂಕಾಲ 5.00 ಗಂಟೆಗೆ ನ್ಯಾಯಾಲಯದ ಕಚೇರಿಗೆ ತಂದು ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಕೋವಿಡ್ ಇದ್ದುದರಿಂದ ಪ್ರಥಮ ವರ್ತಮಾನ ವರದಿಯ ದಾಖಲೆಯನ್ನು ಕಚೇರಿಯಲ್ಲಿ ನೀಡಿರುತ್ತೇನೆ. ಈಗ ನೋಡಿದ ಪ್ರಥಮ ವರ್ತಮಾನ ವರದಿಯನ್ನು ನಾನು ನೀಡಿದ್ದು ಇದೆ. ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್., ವಕೀಲರಿಂದಃ

3) ನಾನು ಆ ದಿನ ಪ್ರಥಮ ವರ್ತಮಾನ ವರದಿಯನ್ನು ಮಧ್ಯಾಹ್ನ 3.05 ಗಂಟೆಗೆ ಪೊಲೀಸ್ ಠಾಣೆಯಿಂದ ಪಡೆದುಕೊಂಡಿರುತ್ತೇನೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.